## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ

## ಸಿಸಿ ನಂ. 125/2019

ಚಾಸಾ-1 ಫ್ರಾಸಾ-1

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ ಪಡೆದುಕೊಳ್ಳಲಾಯಿತು.
ದಿನಾಂಕ: 13-03-2026

| | | |
|---|---|---|
| ಹೆಸರು | : | ರುಕ್ಸಾನಾ |
| ಗಂಡನ ಹೆಸರು | : | ಮೈನುದ್ದೀನ |
| ವಯಸ್ಸು | : | 28 ವರ್ಷ |
| ಉದ್ಯೋಗ | : | ಕೂಲಿಕೆಲಸ |
| ವಾಸಸ್ಥಳ | : | ಮಾಷಾಳ |

-: ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-

ಚಾಸಾ 4 ಅತ್ತೆ, ಚಾಸಾ 5 ನಾದಿನಿ ಇರುತ್ತಾರೆ.

ನಮ್ಮ ಮತ್ತು ಆರೋಪಿತರ ನಡುವೆ ಬಾಯಿ ಮಾತಿನ ಮಾತಿನ ಜಗಳವಾಗಿದ್ದು ಸಿಟ್ಟಿನ ಭರದಲ್ಲಿ ನಾನು ಒಂದು ದೂರನ್ನು ನೀಡಿರುತ್ತೇನೆ. ಆದರೆ ಅದರಲ್ಲಿ ಏನು ಬರೆದಿದೆ ಅಂತ ನನಗೆ ಗೊತ್ತಿಲ್ಲ. ಆರೋಪಿತರು ನನಗೆ ಅವ್ಯಾಚ್ಛ ಶಬ್ಧಗಳಿಂದ ಬೈದಿಲ್ಲ ಹೊಡೆ ಬಡೆ ಮಾಡಿಲ್ಲ ಜೀವ ಬೆದರಿಕೆ ಹಾಕಿಲ್ಲ. ನನಗೆ ಈ ಪ್ರಕರಣದ ಕುರಿತು ನನಗೆ ಯಾವುದೇ ಮಾಹಿತಿ ಇಲ್ಲ.

(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸ.ಸ.ಅ. ರವರಿಂದ</u>

ದಿಃ 22-06-2018 ರಂದು ಬೆಳಿಗ್ಗೆ 10-00 ಗಂಟೆ ಸುಮಾರಿಗೆ 1 ನೇ ಆರೋಪಿ ನನಗೆ ಯಾಸಿ ಯಾಸಿಯಾಗಿ ಬೈಯ್ಯುತ್ತಾ ಹೋಗುತ್ತಿದ್ದ ಎಂದರೆ ಸರಿ. ಅದೇ ದಿನ ರಾತ್ರಿ 1 ನೇ ಆರೋಪಿ ನಾನು ಮತ್ತು ನನ್ನ ತಾಯಿ ಕುಳಿತಿದ್ದಾಗ ಯಾಸಿಯಾಗಿ ಬೈಯುತ್ತಿದ್ದರು ಎಂದರೆ ಸರಿ. ಆಗ ಆರೋಪಿತನು ನನ್ನ ಸೀರೆ ಹಿಡಿದು ಎಳೆಯುತ್ತಿದ್ದಾಗ ನಾನು ಚೀರಾಡಿದ್ದಕ್ಕೆ ಚಾಸಾ 4 , 5 ರವರು ಬಂದು ಜಗಳ ಬಿಡಿಸಿರುತ್ತಾರೆ ಎಂದರೆ ಸರಿ. ಮತ್ತು ಆರೋಪಿತರು ನನ್ನ ಮೇಲೆ ಹಲ್ಲೆ ಮಾಡಿ ನನ್ನ ಕುತ್ತಿಗೆಯಲಿದ್ದ ತಾಳಿ ಹರಿದು ಬಾಯಿಂದ ಕಚ್ಚಿ ಗಾಯಮಾಡಿರುತ್ತಾರೆ ಎಂದರೆ ಸರಿ. ಆಗ ಚಾಸಾ 4, 5 ರವರು ಬಿಡಿಸಲು ಬಂದಾಗ 2, 3 ನೇ ಆರೋಪಿತರು ಅವರಿಗೆ ಹೊಡೆದಿರುತ್ತಾರೆ ಎಂದರೆ ಸರಿ. ನೀನು ಈ ರೀತಿ ನಮ್ಮ ತಂಟೆಗೆ ಬಂದರೆ ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ಆರೋಪಿತರು ನನಗೆ ಅವಾಚ್ಯ ಶಬ್ದಗಳಿಂದ ಬೈದು ಹಲ್ಲೆ ಮಾಡಿರುತ್ತಾರೆ ಎಂದು ಈ ಕುರಿತು ನಾನು ವಿಚಾರಣೆ ಮಾಡಿ ಎರಡು ದಿನಗಳ ನಂತರ ಪೋಲಿಸ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ ಎಂದರೆ ಸರಿ.

ಸಾಕ್ಷಿಗೆ ದೂರಿನ ಪ್ರತಿಯನ್ನು ತೋರಿಸಿದ್ದು ಸಾಕ್ಷಿಯೂ ಅದನ್ನು ಗುರುತಿಸಿದ್ದು ಅದನ್ನು ನಿಪಿ **1** ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ **1**(ಎ) ಎಂದು ಗುರುತಿಸಲಾಯಿತು.

ಮರುದಿನ ಪೋಲಿಸರು ನಮ್ಮೂರಿಗೆ ಬಂದಾಗ ಗುನ್ಹೆಸ್ಥಳ ತೋರಿಸಿರುತ್ತೇನೆ ಎಂದರೆ ಸರಿ. ನ್ಯಾಯಾಲಯದ ಮುಂದೆ ಇರುವ ಆರೋಪಿತರಿಗೆ ನೋಡಿ ಸಾಕ್ಷಿ ಗುರುತಿಸುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ **SMA** ವಕೀಲರಿಂದಃ-</u>

ಮೊದಲು ನಾವು ಜಗಳ ಮಾಡಿದ ನಂತರ ಅವರು ದೂರು ನೀಡಿರುತ್ತಾರೆ ಎಂದರೆ ಸರಿ. ನನ್ನ ಬಲಗೈಗೆ ಕಚ್ಚಿರುತ್ತಾರೆ. ರಾತ್ರಿ 8 ಗಂಟೆ ಮುಂದೆ ಜಗಳ ಆಗಿರುತ್ತದೆ. ಜಗಳ ಆದಾಗ ನಾವೇ ಇದ್ದೆವು. ಪೋಲಿಸರು ಬರೆದುಕೊಂಡ ದೂರಿಗೆ ಅವರು ಸಹಿ ಮಾಡು ಎಂದರೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ಆರೋಪಿತರೊಂದಿಗೆ ಜಗಳ ಮಾಡಿಲ್ಲ, ನಾನು ಅವರ ವಿರುದ್ಧ ಸುಳು ದೂರು ನೀಡಿರುತ್ತೇನೆ ಎಂದರೆ ಸಾಕ್ಷಿ ಸುಮ್ಮನೆ ನಿಲ್ಲುತ್ತಾರೆ.

<u>ಮರು ವಿಚಾರಣೆಃ - ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ ದಂಡಾಧಿಕಾರಿಗಳು
ಅಫಜಲಪೂರ